**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ 10.08.2026.**

**ಪಾಟೀ ಸವಾಲುಃ ವಾದಿ ಪರ ಶ್ರೀ ವೈ ಕೆ ವಕೀಲರಿಂದಃ**

ನಾನು ಎಂ ಬಿ ಎ ಪದವಿಧರನಾಗಿರುತ್ತೇನೆ. ನಾನು ಹಾಸನದ ಫಾರ್ಮರ್ industries ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಹಾನಸದಲ್ಲಿಯೇ ವಾಸ. ರಜಾ ದಿನಗಳಲ್ಲಿ ನಾನು ಊರಿಗೆ ಬಂದು ಜಮೀನನ್ನು ನೋಡಿಕೊಳ್ಳುತ್ತೇನೆ. ನನ್ನ ತಮ್ಮ ವ್ಯವಸಾಯ ಮಾಡುತ್ತಾರೆ. ಅವರು ಊರಿನಲ್ಲೇ ಇರುತ್ತಾರೆ. ಸ ನಂ 153 ಮಂಕನಹಳ್ಳಿ ಗ್ರಾಮದ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಾರೆ. ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಅದರಲ್ಲಿ ನಾನು ಹಾಸನದ ವಿಳಾಸವನ್ನು ಕೊಡಲು ತೊಂದರೆ ಇರಲಿಲ್ಲ. ದಾವಾ ಆಸ್ತಿಯ ಸ ನಂ 153 ಆಗಿರುತ್ತದೆ. ಅದರಲ್ಲಿ 1 ಎಕರೆ 34 ಗುಂಟೆ ಇದೆ. ಸದರಿ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿದೆ. ಈ ದಾವೆಯನ್ನು ಸಾಮಿಗೌಡ, ಬಸವೇಗೌಡ ಮತ್ತು ಪವೀಣಪ್ರಸನ್ನ ರವರು ನನ್ನ, ನನ್ನ ತಮ್ಮ ಮತ್ತು ನನ್ನ ತಂದೆಯ ವಿರುದ್ದ ಸಲ್ಲಿಸಿರುತ್ತಾರೆ. ದಾವಾ ಆಸ್ತಿ ಮತ್ತು ಈ ದಾವೆಯನ್ನು ಯಾರು ಸಲ್ಲಿಸಿರುತ್ತಾರೆ ಎಂದು ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಸ ನಂ 153 ರಲ್ಲಿರುವ ಸ್ವತ್ತನ್ನು ನೋಡಿಕೊಳ್ಳುತ್ತೇನೆ. ಸದರಿ ಜಮೀನಿನಲ್ಲಿ ನಾನು 20 ವರ್ಷಗಳಿಂದ ರೊಬೋಸ್ಟ ಕಾಫಿ ಬೆಳೆದಿದ್ದೇನೆ. 8 ಅಡಿಗೆ ಒಂದು ಗಿಡ ಬೆಳೆದಿರುತ್ತೇನೆ. 1 ಎಕರೆ 34 ಗುಂಟೆಯಲ್ಲಿ ಪೂರ್ತಿಯಾಗಿ ಕಾಫಿ ಬೆಳೆದಿದ್ದೇನೆ. ಎಷ್ಟು ಗಿಡಗಳನ್ನು ಹಾಕಿರುತ್ತೇನೆ ಎಂದು ನನಗೆ ಲೆಕ್ಕ ಮಾಡಿ ಹೇಳಲು ಸಾದ್ಯವಿಲ್ಲ. 8 ಅಡಿಗೆ ಒಂದು ಗಿಡದಂತೆ 1 ಎಕರೆಗೆ ಎಷ್ಟು ಗಿಡಗಳು ಇರುತ್ತವೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಸ ನಂ 153 ರ ವಿಸ್ತೀರ್ಣ 1 ಎಕರೆ 34 ಗುಂಟೆ ಎಂದು ಬರೆಸಿರುತ್ತೇನೆ. ಸದರಿ ಜಾಗದ ಚೆಕ್ಕುಬಂಧಿ ಪೂಃ ಸರಕಾರಿ ಜಾಗ, ಪಃ ಸ ನಂ 35 ರ ಜಮೀನು, ಉಃ ಸರಕಾರಿ ಜಾಗ, ದಃ ಬಿ ಜಿ ಪುಟ್ಟಸ್ವಾಮಿಗೌಡ ರವರ ಜಾಗ ಇದೆ. ಸ ನಂ 35 ರ ಜಮೀನು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸ ನಂ 35 ಯಾವ ಸ್ವರೂಪದ ಜಮೀನು ಎಂದು ನನಗೆ ಗೊತ್ತಿಲ್ಲ. ಯಾವತ್ತೂ ನಾನು ಸ ನಂ 153 ರ ಪಕ್ಕ ಹೋಗಿರುವುದಿಲ್ಲ ಹಾಗಾಗಿ ಅದರ ಸುತ್ತುಮುತ್ತಲಿನ ಜಮೀನಿನ ಸ. ನಂ ಮತ್ತು ಸ. ನಂ 153 ರ ಸ್ವತ್ತಿನ ಸ್ವರೂಪ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸ ನಂ 153 ರಲ್ಲಿ ಯಾವುದೇ ಕಾಫಿ ಬೆಳೆದಿರುವುದಿಲ್ಲ, ಹಿಂದೆ ಅದರಲ್ಲಿ ಏಲಕ್ಕಿ ಬೆಳೆದು ಈಗ ಅದು ಪಾಳು ಬಿದ್ದಿದೆ ಎಂದರೆ ಸರಿಯಲ್ಲ. ಈ ವರ್ಷ ನಾವು 60 ಚೀಲ ಕಾಫಿ ಬೆಳೆದಿರುತ್ತೇವೆ. ಜಮೀನಿನಲ್ಲಿ ಬೆಳೆದಿರುವ ಬೆಳೆಯ ವಿವರ ಪಹಣಿ ಪತ್ರಿಕೆಯಲ್ಲಿ ನಮೂದಾಗಿರುತ್ತದೆ ಎಂದರೆ

ಸರಿ. ಸಾಕ್ಷಿದಾರರಿಗೆ ನಿಪಿ.3 ನ್ನು ತೋರಿಸಲಾಗಿ ಅದರಲ್ಲಿ ಖುಷ್ಕಿ ಎಂದು ನಮೂದಾಗಿದೆ ಎಂದರೆ ಸಾಕ್ಷಿದಾರರು 2019 ರಲ್ಲಿ ಸದರಿ ಸ್ವತ್ತಿನಲ್ಲಿ ಏಲಕ್ಕಿ ಬೆಳೆ ಬೆಳೆದಿದ್ದರಿಂದ ಪಹಣಿಯಲ್ಲಿ ಏಲಕ್ಕಿ ಎಂದು ಕಾಣಿಸಲಾಗಿದೆ ಎಂದು ನುಡಿಯುತ್ತಾರೆ. ಖಾಲಿ ಇದ್ದ ಜಾಗ ಮಾತ್ರ ಖುಷ್ಕಿ ಎಂದು ನಮೂದಾಗುತ್ತದೆ ಎಂದರೆ ಸರಿ. ನಾನು ಸ ನಂ 153 ರ ಜಮೀನಿನಲ್ಲಿ ಯಾವುದೇ ಬೆಳೆಯನ್ನು ಬೆಳೆಯದೆ ಇರುವುದರಿಂದ ಪಹಣಿಯಲ್ಲಿ ಖುಷ್ಕಿ ಎಂದು ಕಾಣಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ.7 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಲುವಾಗಿ ತೆಗೆದುಕೊಂಡಿರುತ್ತೇನೆ. ಆಗಿನ ಗ್ರಾಮ ಲೆಕ್ಕಾಧಿಕಾರಿ ರವಿಶಂಕರ್ ರವರು ದಿಃ 06.01.2014 ರಲ್ಲಿ ನೀಡಿರುತ್ತಾರೆ ಎಂದರೆ ಸರಿ. 2014 ರಲ್ಲಿ ವಾದಿಯವರಾಗಲೀ ಅವರ ತಂದೆಯವರಾಗಲೀ ನಮ್ಮ ವಿರುದ್ದ ಯಾವ ದೂರಾಗಲೀ ದಾವೆಯಾಗಲೀ ಸಲ್ಲಿಸಿರುವುದಿಲ್ಲ. ನಿಪಿ.8 ನ್ನು ನನ್ನ ತಂದೆಯ ಹೇಳಿಕೆಯ ಮೇರೆಗೆ ಗ್ರಾಮ ಲೆಕ್ಕಾಧಿಕಾರಿಯವರು ನೀಡಿರುತ್ತಾರೆ ಎಂದರೆ ಸರಿ. ನಿಪಿ.8 ನ್ನು ಬ್ಯಾಂಕ್ ನಿಂದ ಸಾಲ ಪಡೆಯುವ ಉದ್ದೇಶದಿಂದ ಬರೆಸಿ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ.7 ನ್ನು ಈ ದಾವೆಯಲ್ಲಿ ಸಲ್ಲಿಸುವ ಸಲುವಾಗಿ ತೆಗೆದುಕೊಂಡಿರುವುದಿಲ್ಲ ಬದಲಾಗಿ ನಮಗೆ ಬೇಕಾದಂತೆ ಬರೆಸಿ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಖರೀದಿ ಮಾಡುವ ಪೂರ್ವದಲ್ಲಿ ಸ ನ 153 ರ ಸ್ವತ್ತಿಗೆ ಯಾವ ಸ.ನಂಬರ್ ಇತ್ತು ಎಂದು ನಾನು ತಿಳಿದುಕೊಂಡಿಲ್ಲ. ನಿಡಿ.1 ನ್ನು ನಾನು ಮತ್ತು ನನ್ನ ತಂದೆ ಸೇರಿ ಹಾಜರುಪಡಿಸಿರುತ್ತೇವೆ. ಅದರಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೇನೆ. ನಿಡಿ.1 ರಲ್ಲಿ ಮೂಲ ಸ.ನಂಬರ್ ಬರೆಯಲಾಗಿದೆಯೋ ಇಲ್ಲವೋ ನಾನು ಗಮನಿಸಿರುವುದಿಲ್ಲ. ಸ ನಂ 153 ರ ಸ್ವತ್ತನ್ನು ನಾವು ಕರೆಗೌಡರವರಿಂದ 1998-99 ರಲ್ಲಿ ಖರೀದಿ ಮಾಡಿರುತ್ತೇವೆ. ನನ್ನ ಪ್ರಮಾಣ ಪತ್ರದಲ್ಲಿ ಸ ನಂ 153 ರಲ್ಲಿ ಕಾಫಿ ಬೆಳೆದಿರುವ ವಿಚಾರವನ್ನು ಹೇಳಿರುತ್ತೇನೆ. ಆ ರೀತಿ ನಾನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಖರೀದಿ ಮಾಡುವ ಪೂರ್ವದಲ್ಲಿ ಸ್ವತ್ತು ಹದ್ದುಬಸ್ತಾಗಿ ಪೋಡಾಗಿತ್ತು. 2018-19 ರಲ್ಲಿ ನಾವು ಪುನಃ ಹದ್ದುಬಸ್ತು ಸರ್ವೆ ಮಾಡಿಸಿರುತ್ತೇವೆ. ಸದರಿ ಹದುಬಸ್ತು ವರದಿಯನ್ನು ಮತ್ತು ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿ ಹದ್ದುಬಸ್ತು ವರದಿ ಮತ್ತು ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸ. ನಂ.153 ರ ಮೂಲ ಸ.ನಂ 40 ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸ ನಂ 40 ರ ಸ್ವತ್ತು ನನ್ನ ತಾಯಿಯ ಹೆಸರಿನಲ್ಲಿ ಇದೆ. ಎಷ್ಟು ಇದೆ ಎಂದು ನನಗೆ ನೆನಪಿಲ್ಲ. ಅದರಲ್ಲಿ ನನ್ನ ತಾಯಿ ಮತ್ತು ನಮ್ಮ ಒಟ್ಟು ಕುಟುಂಬ ಸೇರಿ ಸಾಗುವಳಿ ಮಾಡುತ್ತಿದ್ದೇವೆ. ನನ್ನ ತಾಯಿಗೆ ಸದರಿ ಸ್ವತ್ತು ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿಯೂ 20 ವರ್ಷಗಳಿಂದ ಕಾಫಿ ಬೆಳೆಯುತ್ತಿದ್ದೇವೆ. ಸ ನಂ 153 ರ ಪೂರ್ವ ದಿಕ್ಕಿನಲ್ಲಿ ಸ. ನಂ 40 ರ ಸ್ವತ್ತು ಇದೆ. ಸದರಿ ಸ. ನಂ 40 ರ ಜಮೀನು

ಸರಕಾರಿ ಗೋಮಾಳ ಆಗಿರುತ್ತದೆ. ಅದರಲ್ಲಿ ಬೇರೆ ಯಾರಿಗೆಲ್ಲಾ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ.

ದಿಃ 09.09.2020 ರಂದು ವಾದಿ ಮತ್ತು ಅವರ ಮಕ್ಕಳು ಸ ನಂ 153 ರ ಸ್ವತ್ತಿಗೆ ಅಗಳು ತೆಗೆಯಲು ಬಂದಿರುತ್ತಾರೆ. ಆ ಸಂಬಂಧವಾಗಿ ದಿಃ 19.09.2020 ರಲ್ಲಿ ನಾವು ಪೊಲೀಸರಿಗೆ ದೂರನ್ನು ನೀಡಿರುತ್ತೇವೆ. ವಾದಿ ಮತ್ತು ಅವರ ಮಕ್ಕಳು ಜೆ ಸಿ ಬಿ ಯಲ್ಲಿ ಅಗಳು ತೆಗೆಯಲು ಬಂದಿದ್ದರು, ಆದರೆ ನಾವು ಅವರನ್ನು ಅಗಳು ತೆಗೆಯಲು ಬಿಟ್ಟಿರುವುದಿಲ್ಲ. ಪೊಲೀಸರು ಸ್ಥಳಕ್ಕೆ ಬಂದಿರುವುದಿಲ್ಲ. ವಾದಿಯವರು ಸ್ಥಳದಲ್ಲಿ ಅಗಳು ತೆಗೆಯುಸುತ್ತಿದ್ದರು ಎಂದು ದೂರು ನೀಡಿರುವುದಾಗಿ ನಿಡಿ.8 ರಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿ. ವಾದಿ ಮತ್ತು ಅವರ ಮಕ್ಕಳ ವಿರುದ್ದ ಸುಳ್ಳು ದೂರನ್ನು ನೀಡಿ ನಿಡಿ.8 ರ ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರೆದು ದೂರು ನೀಡಿದ ನಂತರ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು ಸ್ದಳಕ್ಕೆ ಬಂದು ಫೋಟೋ ತೆಗೆದಿರುವುದಿಲ್ಲ ಯಾವುದೇ ಮಹಜರ್ ಗಳನ್ನು ಮಾಡಿರುವುದಿಲ್ಲ. ಪೊಲೀಸರು ಸ್ದಳಕ್ಕೆ ಬಂದಿರುವುದಿಲ್ಲ ಠಾಣೆಯಲ್ಲಿ ಸುಳ್ಳು ದೂರನ್ನು ನೀಡಿ, ಸುಳ್ಳು ಮಹಜರ್ ನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.6 ರ ದಾಖಲೆ ಸ. ನಂ 153 ರ ನಕ್ಷೆಯನ್ನು ಯಾವಾಗ ನೀಡಿರುತ್ತಾರೆ ಎಂದು ನನಗೆ ದಿನಾಂಕ ಗೊತ್ತಿಲ್ಲ. ನಿಡಿ.6 ರಲ್ಲಿ ಸ. ನಂ 35 ರವರು ಸ. ನಂ 153 ರಲ್ಲಿ ಒತ್ತುವರಿ ಮಾಡಿರುವುದಾಗಿ ನಮೂದು ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ನಾನು ಮತ್ತು ನನ್ನ ತಂದೆ ಹಾಜರುಪಡಿಸಿರುತ್ತೇವೆ, ಆದರೆ ಅದನ್ನು ಓದಿ ತಿಳಿದುಕೊಂಡಿಲ್ಲ.

ಸ ನಂ 153 ರನ್ನು ಕ್ರಯಕ್ಕೆ ಪಡೆದುಕೊಳ್ಳುವಾಗ ಅದರಲ್ಲಿ ಏಲಕ್ಕಿ ಬೆಳೆಯುತ್ತಿದ್ದರು. ಕ್ರಯಪತ್ರದಲ್ಲಿ ಸದರಿ ಸ್ವತ್ತು ಏಲಕ್ಕಿ ತೋಟ ಎಂದು ಬರೆದಿರುತ್ತದೆ. ಸದರಿ ಸ್ವತ್ತು ಪೂರ್ವದಲ್ಲಿ ತಮ್ಮಣ್ಣೇಗೌಡ ರವರಿಗೆ ಸೇರಿತ್ತು. ತಮ್ಮಣ್ಣೇಗೌಡ ರವರಿಗೆ ಸದರಿ ಸ್ವತ್ತು ಹೇಗೆ ಬಂದಿತ್ತು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸ ನಂ 150 ರಿಂದ 153 ಎಂದು ಆಗಿರುತ್ತದೆ. ಆ ರೀತಿ ಕ್ರಯವಾಗುವ ಮೊದಲೆ ಸರ್ವೆ ನಂಬರ್ ಬದಲಾಗಿತ್ತು. ಹಳೆ ಸರ್ವೆ ನಂ 150 ಎಂದು ತೋರಿಸಲು ಗ್ರಾಮ ನಕಾಶೆಯನ್ನು ಹಾಜರುಪಡಿಸಿರುತ್ತೇನೆ. ಕ್ರಯಪತ್ರದಲ್ಲಿ ಹಳೆ ಸ ನಂ 150 ಮತ್ತು ಹೊಸ ಸ ನಂ 153 ಎಂದು ನಮೂದು ಮಾಡಿರುವುದಿಲ್ಲ. ಸ ನಂ 153 ರ ದಃ ಸ ನಂ 35 ರ ಸ್ವತ್ತು ಇದೆ, ಅದು ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಸ ನಂ 153 ರ ದಃ ಸರಕಾರಿ ಜಾಗ ಇದೆ ಎಂದರೆ ಸರಿಯಲ್ಲ. ಅದರ ನಂತರದಲ್ಲಿ ಸೋಮೇಗೌಡ, ಮಲ್ಲೇಶ್ ಮತ್ತು ಬಸವೇಗೌಡ ರವರ ಸ್ವತ್ತು ಇದೆ ಎಂದರೆ ನನಗೆ ಗೊತ್ತಿಲ್ಲ. ಮಂಕನಹಳ್ಳಿಯ ಸ ನಂ 152 ರಲ್ಲಿ ವಾದಿಗೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನ

ವಾದಿಯವರು ಸ ನಂ 152 ರ ಸ್ವತ್ತಿಗೆ ಸಂಬಂದಪಟ್ಟಂತೆ ಹೂಡಿರುತ್ತಾರೆ. ಸ ನಂ 152 ರಲ್ಲಿ ವಾದಿಯವರಿಗೆ 3 ಎಕರೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯವರು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ, ಅವರ ವಾದ ಪತ್ರದಲ್ಲಿ ಹೇಳಿರುವ ವಿಚಾರಗಳನ್ನ ತಿಳಿದುಕೊಂಡಿದ್ದೇನೆ. ನನ್ನ ಪ್ರತಿವಾದ ಪತ್ರದಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೇನೆ. 1988ನೇ ಇಸವಿಯಲ್ಲಿ ವಾದಿಯವರು ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದುಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ. ಸ ನಂ 152 ರ ಒಟ್ಟು ವಿಸ್ತೀರ್ಣ 5 ಎಕರೆ 32 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಲು ನಾನು, ನನ್ನ ತಂದೆ ಮತ್ತು ನನ್ನ ತಮ್ಮ ಸೇರಿ ಮಾಹಿತಿ ಕೊಟ್ಟಿರುತ್ತೇವೆ. ಆಗ ಸ ನಂ 153 ರ ಸ್ವತ್ತಿನ ಬಗ್ಗೆ ಮಾತ್ರ ಮಾಹಿತಿ ನೀಡಿದ್ದೇವೆ, ಸ ನಂ 152 ರ ಸ್ವತ್ತಿನ ಬಗ್ಗೆ ನಾವು ಹೇಳಿರುವುದಿಲ್ಲ. ಸ ನಂ 152 ರಲ್ಲಿ ವಾದಿಯ ಸಹೋದರ ಬಸವೇಗೌಡ ರವರಿಗೆ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಮಲ್ಲೇಶ್ ರವರಿಗೂ ಸಹ 1 ಎಕರೆ 26 ಗುಂಟೆ ಇರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಮಲ್ಲೇಶ್ ಮತ್ತು ಬಸವೇಗೌಡ ರವರಿಗೆ ಅವರ ತಂದೆಯಿಂದ ಜುಬಾನಿ ಹಿಸ್ಸೆಯ ಮೂಲಕ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸ ನಂ 152 ರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ ನಂ 152 ರಸ್ವತ್ತು ನಮ್ಮ ಸ್ವತ್ತಿನ ಯಾವುದೇ ದಿಕ್ಕಿನಲ್ಲಿ ಇಲ್ಲ. ಸ ನಂ 152 ನಮ್ಮ ಸ್ವತ್ತಿನ ಅಕ್ಕಪಕ್ಕದಲ್ಲಿ ಇಲ್ಲದೇ ಇರುವುದರಿಂದಾಗಿ ಸದರಿ ಸ್ವತ್ತಿಗೆ ಸಂಬಂದಪಟ್ಟಂತೆ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಮಾಡುವುದರಿಂದ ನಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಸ ನಂ 153 ರ ಪಕ್ಕದಲ್ಲಿರುವ ಸ ನಂ 40 ರಲ್ಲಿರುವ ಸರಕಾರಿ ಜಾಗದಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದೀರಿ ಎಂದರೆ ಸಾಕ್ಷಿದಾರರು ಸದರಿ ಜಾಗ ನನ್ನ ತಾಯಿಯ ಹೆಸರಿಗೆ ಸರಕಾರದಿಂದ ಮಂಜೂರಾಗಿದೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಸ ನಂ 153 ರ ದಕ್ಷಿಣ ದಿಕ್ಕಿನಲ್ಲಿಯೂ ಸಹ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಕ್ಷಿಣ ದಿಕ್ಕಿನಲ್ಲಿಯೂ ಸಹ 2 ಎಕರೆ ಜಾಗ ನನ್ನ ತಾಯಿ ಹೆಸರಿಗೆ ಸರಕಾರದಿಂದ ಮಂಜೂರಾಗಿರುತ್ತದೆ. ಆ ರೀತಿ ಸರಕಾರದಿಂದ ಯಾವುದೇ ಸ್ವತ್ತು ಮಂಜೂರಾಗದೇ ಇದ್ದರೂ ಸಹ ಸರಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ವಾದಿಯವರ ಸ್ವತ್ತನ್ನು ಸಹ ಒತ್ತುವರಿ ಮಾಡಲು ಪ್ರಯತ್ನಿಸುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯವರ ಮತ್ತು ನಿಮ್ಮ ಸ್ವತ್ತನ್ನು ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡುವ ಮೂಲಕ ಸರ್ವೆ ಮಾಡಿಸಲು ನಿಮಗೆ ತೊಂದರೆ ಇದೆಯ ಎಂದರೆ ಸಾಕ್ಷಿದಾರರು ವಾದಿಯವರ ಸ್ವತ್ತನ್ನು ಬೇಕಾದರೆ ಸರ್ವೆ ಮಾಡಿಸಿಕೊಳ್ಳಲಿ ನಮ್ಮ ಸ್ವತ್ತನ್ನು ನಾವು ಹದ್ದುಬಸ್ತು ಮಾಡಿಕೊಂಡಿದ್ದೇವೆ, ನಮ್ಮ ಸ್ವತ್ತನ್ನು ಸರ್ವೆ ಮಾಡುವುದು ಬೇಡ ಎಂದು ನುಡಿಯುತ್ತಾರೆ. ಆ ರೀತಿ ಯಾವುದೇ ಹದ್ದುಬಸ್ತು

ಆಗಿರುವುದಿಲ್ಲ, ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ನ್ಯಾಯಾಲಯದಿಂದ ನಿಮ್ಮ ಸ್ವತ್ತನ್ನು ಸರ್ವೆ ಮಾಡಿಸಿದರೆ ಸರಕಾರಿ ಜಮೀನನ್ನು ಒತ್ತುವರಿ ಮಾಡಿರುವ ವಿಚಾರ ನ್ಯಾಯಾಲಯಕ್ಕೆ ತಿಳಿದುಬರಬಹುದು ಎನ್ನುವ ಕಾರಣದಿಂದ ಸರ್ವೆ ಮಾಡಿಸುವುದು ಬೇಡೆ ಎಂದು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ವಾದಿ, ಮಲ್ಲೇಶ ಮತ್ತು ಬಸವೇಗೌಡ ರವರ ಜಮೀನಿಗೆ ಉತ್ತರ ದಿಕ್ಕಿನಿಂದ ಅತಿಕ್ರಮವಾಗಿ ಪ್ರವೇಶ ಮಾಡಿ, ಅವರ ಮರಗಳನ್ನ ಕಡಿಯಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯವರು ಸ್ವಾಧೀನ ಇರುವ ಸ್ವತ್ತನ್ನು ನನ್ನದೇ ಎಂದು ಅವರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯವರ ಸ್ವತ್ತನ್ನು ಮತ್ತು ನನ್ನ ಸ್ವತ್ತನ್ನು ಒಟ್ಟಾಗಿ ಮಾರಾಟ ಮಾಡಿಸುವುದಾಗಿ ಬೇರೆಯವರ ಮೂಲಕ ನಾನು ಹೇಳಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಸಲುವಾಗಿ ಆಗಿಂದಾಗೆ ವಾದಿಯವರಿಗೆ ತೊಂದರೆ ನೀಡುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ. ಸ ನಂ 152 ಕ್ಕೆ ವಾದಿಯವರೇ ಮಾಲೀಕರು ಎನ್ನುವ ಬಗ್ಗೆ ದಾಖಲಾತಿಗಳನ್ನ ಹಾಜರುಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೆ ಕೇ ಸ ಇ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**